ಎನ್. ಜಗನ್ನಾಥ ಪ್ರಕಾಶ್

# ಪೌರಾಣಿಕ ನಾಟಕಗಳ ಮಿಂಚು: ವಜ್ರಪ್ಪ



ಬಾಲ ಕಲಾವಿದನಾಗಿ ರಂಗಭೂಮಿಗೆ ಕಾಲಿಟ್ಟು ನಂತರ ಸಂಗೀತಕ್ಕೆ ಒಲಿದು ಅದರಲ್ಲೇ ಸಾಧನೆ ಮಾಡಿದ್ದಲ್ಲದೆ ಪೌರಾಣಿಕ ನಾಟಕಗಳ ಬೆಳವಣಿಗೆಗೆ ಕಾರಣರಾಗಿ ಖ್ಯಾತಿ ಪಡೆದವರು ಪಿ. ವಜ್ರಪ್ಪ.

ಶಾಲೆಗೆ ಹೋದರೂ ನಾಟಕಗಳತ್ತಲ್ಲೇ ಕಣ್ಣು ನೆಟ್ಟಿದ್ದ ವಜ್ರಪ್ಪನನ್ನು ಬಣ್ಣದ ಬದುಕಿಗೆ ಅಣಿಗೊಳಿಸಿದವರು ಪಾರಿಜಾತಪ್ಪ ಹಾಗೂ ನಾರಾಯಣಮ್ಮ ದಂಪತಿ. ಬಣ್ಣ ಹಚ್ಚಿಕೊಂಡು ರಂಗಮಂಚ ಹತ್ತಿದ ವಜ್ರಪ್ಪ ಕಲಿಯಲು ಶುರುಮಾಡಿದ್ದು ಹಾರ್ಮೋನಿಯಂ ವಾದನ.

ಕನ್ನಡ ರಂಗಭೂಮಿಯ ಹಿರಿಯ ನಟರಲ್ಲೊಬ್ಬರಾದ ಕೊಟ್ಟೂರಪ್ಪನವರ ಚಾಮುಂಡೇಶ್ವರಿ ನಾಟಕ ಸಂಸ್ಥೆಯಿಂದ ಆರಂಭವಾದ ವಜ್ರಪ್ಪನವರ ನಾಟಕಗಳ ಒಡನಾಟ ಕೊನೆಯವರೆಗೂ ಅವರನ್ನು ಬಿಡಲಿಲ್ಲ. ಅದಕ್ಕೆ ಅವರ ಅಭಿನಯ ಕಾರಣವಲ್ಲ. ಸಂಗೀತದ ಬಗ್ಗೆ ಅವರಿಗಿದ್ದ ಅರಿವು ಜೊತೆಗೆ ಪೌರಾಣಿಕ ನಾಟಕಗಳ ಬಗೆಗಿನ ಅವರ ಅಪಾರ ಜ್ಞಾನ ರಂಗಭೂಮಿಯಲ್ಲಿ ಅವರಿಗೊಂದು ಕಾಯಂ ಸ್ಥಾನ ಗಳಿಸಿ ಕೊಟ್ಟಿತು.

ಬಣ್ಣ ಹಚ್ಚುವುದನ್ನು ಬಿಟ್ಟು ಚಿಕ್ಕವೀರಪ್ಪನವರಿಂದ ಹಾರ್ಮೋನಿಯಂ ಅಭ್ಯಾಸ ಮಾಡಿ ನಂತರ ನಾಟಕ ಕಂಪೆನಿ ಸಂಗೀತ ಮೇಷ್ಟ್ರಾಗಿ, ಪ್ರಾಕ್ಟೀಸು ಮಾಸ್ತರಾಗಿ ರಂಗಭೂಮಿಯಲ್ಲಿ ಹೆಜ್ಜೆಗಳನ್ನು ಇಡತೊಡಗಿದರು ವಜ್ರಪ್ಪ.

ಹಾರ್ಮೋನಿಯಂ ನೈಪುಣ್ಯತೆ